ಸಿಹಿಮೊಗೆ ರಮೇಶ್, ಮೈಸೂರು
ಒಬ್ಬ ಜನಪ್ರತಿನಿಧಿಯೂ ತನ್ನ ಮಗನನ್ನು ಯೋಧನನ್ನಾಗಿ ಮಾಡುವುದೆಂದು ಹೇಳುವುದಿಲ್ಲ. ಏಕೆ?



ಕತ್ತೆಗಳ ಹೊಟ್ಟೇಲಿ ಕುದುರೆ ಹುಟ್ಟಲ್ಲ ಅಂತ ಕತ್ತೆಗಳಿಗೆ ಗೊತ್ತಂತೆ.

ಕಾಳೀಹುಂಡಿ ಶಿವಕುಮಾರ್, ಮೈಸೂರು
ಇಲ್ಲೊಬ್ಬಳು ಬೆಳಕು ನೀನು, ಕಿರಣ ನಾನು ಅಂತಾಳಲ್ಲ ಗುರು...?
ಎಚ್ಚರ! ಮುಂದೆ 'ಕಿ' silent ಆಗಿ ಶುದ್ಧ ರಣ ಮಾತ್ರ ಉಳಿದೀತು.

ಆರತಿ ಘಟಿಕಾರ್, ಬೆಂಗಳೂರು
ನಮ್ಮ ಸಜ್ಜನರ ಸಂಘದ ಅಧ್ಯಕ್ಷಗಿರಿಗೆ ನಿಮ್ಮನ್ನು ಶಿಫಾರಸು ಮಾಡುವೆ... ನಾನು ಕೇಳಿದ ಫೀಸ್ ಕೊಡುವಿರಾ?
ಆಗಬಹುದು. ವೈತರಣೀ ನದಿಯನ್ನು ದಾಟದಿದ್ದರೆ ಸ್ವರ್ಗ ಅಲಭ್ಯ.

ಟಿ.ಎಂ. ಮಾನಪ್ಪ, ಶಿವಮೊಗ್ಗ
ಹುಟ್ಟುಹಬ್ಬಕ್ಕೆ ಕೇಕನ್ನೇ ಏಕೆ ಕತ್ತರಿಸಬೇಕು?



ವಿದೇಶೀಯರು ಹಾಗೆ ಮಾಡುವುದಕ್ಕಿಂತ ಕಾರಣ ಬೇಕಿಲ್ಲ. ಇಂದಿನ ಭಾರತ ಪಶ್ಚಿಮದ ಅನುನಾಯಿ.

ಎಂ.ಎ. ಕುಮಾರ್, ಬೆಂಗಳೂರು
ದೇವರ ಬಳಿ ಕಷ್ಟಗಳನ್ನು ಹೇಳಿಕೊಂಡು ಜ್ಯೋತಿಷಿಗಳ ಬಳಿ ಪರಿಹಾರ ಕೇಳಲು ಹೋಗುವುದೇಕೆ?
ತಮ್ಮ ಕಷ್ಟ ಪರಿಹರಿಸಲು ಮೂಢರನ್ನು ಕಳುಹೆಂಬ ಜ್ಯೋತಿಷಿಗಳ ಬೇಡಿಕೆಗೆ ದೇವ ಆದ್ಯತೆ ನೀಡಬೇಕಲ್ಲ!

ಎನ್.ಕೆ. ಹೆಬ್ಬಾರ್, ಕೋಣೆ
ಎಲ್ಲ ಗಂಡಸರು ಜಾರಿ ಬೀಳುವುದು ಎಲ್ಲಿ? ಯಾವಾಗ?
ಲೇಟೆಸ್ಟ್ ಟ್ರೆಂಡ್ ಎಂದರೆ ಜಾರಿ ನಿರ್ದೇಶನಾಲಯದಲ್ಲಿ; ತಿಂದು ಮೂತಿ ಒರೆಸಿಕೊಳ್ಳದಿದ್ದಾಗ.

ಕಿರಣ್ ಕುಮಾರ್, ಹಳೇಹಳ್ಳಿ
ಸಾವು ಸಮೀಪಿಸುವ ಸಮಯದಲ್ಲಿ ಮನುಷ್ಯ ತುಂಬ ಒಳ್ಳೆಯವನಾಗುತ್ತಾನೆ. ಏನು ಕಾರಣ?
ಕೆಟ್ಟದ್ದನ್ನು ಯೋಚಿಸಲು, ಕಾರ್ಯರೂಪಕ್ಕೆ ತರಲು ಆಗದಷ್ಟು ಸುಸ್ತಾಗಿರುತ್ತಾನಲ್ಲ.

ಎಸ್. ವೈದೇಹಿ ಶೇಖರ್, ಮೈಸೂರು
ಈ ಭೂಮಿಯ ಮೇಲೆ ಸುಖ, ಸಂತೋಷ, ಸಂಪತ್ತು ಮತ್ತು ನೆಮ್ಮದಿ ಇರುವವರು ಯಾರಾದರೂ ಇದ್ದಾರಾ?
ಬೇಕಾದಷ್ಟು 'ವೈರಲ್' ಆಗಿರುವ ಗುರುಗಳು ಇರುವುದೇ ಹಾಗೆ.

ಕುಮಾರ ಚಲವಾದಿ, ಹಾಸನ
ನಿಮ್ಮನ್ನು ಯಾರೋ ಕದ್ದಾಲಿಸುವರೆಂಬ ಗುಮಾನಿ ನನಗೆ. ನಿಮಗೆ?
ಹಾಗಾದರೂ ಯಾರಾದರೂ ನನ್ನ ಮಾತನ್ನು ಕೇಳಲಿ ಎಂಬ ಮಹದಾಸೆ.

ವಿಜಯ್‌ಕುಮಾರ್ ಎಚ್.ಕೆ. ಶಕ್ತಿನಗರ
ಪಿತೃವಾಕ್ಯ ಪರಿಪಾಲನೆಯಲ್ಲಿ ಶ್ರೀರಾಮಚಂದ್ರ ಗ್ರೇಟಾ, ಪರಶುರಾಮ ಗ್ರೇಟಾ?
ಶ್ರೀರಾಮ. ಪರಶುರಾಮ ತಲೆ ಹಾರಿಸಿ, ಕೋಪ ಆರಿಸಿ, ಮತ್ತೆ ತಲೆ ಬೇಡಿದ. ಶ್ರೀರಾಮನದು ಬೇಷರತ್.

ತಲಕಾಡು ಶ್ರೀನಿಧಿ, ಬೆಂಗಳೂರು
ತ್ರಿಮತಸ್ಥರಿಗೆ ಗುರುಗಳು ಇರುವಂತೆ ಭಿನ್ನಮತದವರಿಗೂ ಗುರುಗಳು ಇರುವರಾ ರಾಮ್ ಸರ್?
ವಿಭಿನ್ನ ದಿನಗಳಲ್ಲಿ, ವಿಭಿನ್ನ ಕಾರಣಗಳಿಗೆ, ವಿಭಿನ್ನ ಮೌಲ್ಯಗಳ, ವಿಭಿನ್ನ ಗುರುಗಳು ಇರುತ್ತಾರೆ.

ಎ.ಕೆ. ಪಟ್ಟಾಭಿ, ಬೆಂಗಳೂರು
ಈಗ 'ಉದಯವಾಯಿತು ನಮ್ಮ ಚೆಲುವ ಕನ್ನಡನಾಡು' ಎಂದೇಕೆ ಹೇಳಬಾರದು?
'ತಮಿಳು ಇಂಗ್ಲಿಷಿನ ನಡುವೆ ಇನಿತೆ ಕೇಳಿತು ನೋಡು' ಎಂಬುದು ಎರಡನೆಯ ಸಾಲಾದರೆ... ಹೇಳಬಹುದು!

## ಬಹುಮಾನಿತ ಪ್ರಶ್ನೆ

ಎಸ್. ಶಶಿಧರ್, ಬೆಂಗಳೂರು
ಹೆಂಗಸರು ಅಳುಮುಂಜಿಗಳಾದರೂ ಅವರ ಕರವಸ್ತ್ರವೇಕೆ ಅಂಗೈಯಗಲ ಕೂಡ ಇರುವುದಿಲ್ಲ?
ಬಳಸುವ ಅಗತ್ಯವೇ ಬೀಳದು. ಸ್ತ್ರೀಯ ಕಣ್ಣಂಚಿನಲ್ಲಿ ನೀರಾಡಿದರೂ ಬೆಂಬಲಕ್ಕೆ ಭುಜಗಳ ಸಾಲುಸಾಲು.

ರವೀಂದ್ರನಾಥ ಯಡಹಳ್ಳಿ, ಬೀಳಗಿ
ಗಗನದಲ್ಲಿ ಹಾರಾಡುವ ಹಕ್ಕಿಗಳಿಗೂ, ಪ್ರೇಮಲೋಕದಲ್ಲಿ ವಿಹರಿಸುವ ಪ್ರೇಮಿಗಳಿಗೂ ವ್ಯತ್ಯಾಸ?
ಹಕ್ಕಿಗೆ ಬೇಡ ಬೇಡ; ಪ್ರೇಮಿಗಳಿಗೆ ಬೇಡ ಎನ್ನುವವರು ಬೇಡ.

ಜಿ.ಆರ್. ಪುರಾಣಿಕ್, ಬೀಜಾಡಿ ಗ್ರಾಮ
ಮದುವೆ ಆದಮೇಲೆ 'ಅಪಸ್ವರ' ಮೂಡುವುದು ಯಾವಾಗ?
ಅಮಲು ಕಡಿಮೆ, ಅಹಂ ಹೆಚ್ಚು ಆದಾಗ.

ಎಚ್.ಎಂ. ಅನಂತಪದ್ಮನಾಭ, ಮೈಸೂರು
ಸರ್ಕಾರಿ ಶಾಲಾ ಮಾಸ್ತರರಿಗೂ, ಕುರಿ ಕಾಯುವವನಿಗೂ ಇರುವ ಸಾಮ್ಯವೇನು?



ಇಬ್ಬರಿಗೂ 'ಆಡುಭಾಷೆ'ಯ ಪರಿಚಯ ಚೆನ್ನಾಗಿರಬೇಕು.

ಬಿ. ಚಂದ್ರೇಗೌಡ, ಬೆಂಗಳೂರು
ಯಮನನ್ನು ಜವರಾಯ ಎಂದೇಕೆ ಕರೆಯುತ್ತಾರೆ?
ಜವನಿಕೆ ಎಂದರೆ ತೆರೆ. ಜೀವನಕ್ಕೆ ತೆರೆ ಎಳೆಯುವ ರಾಯನೇ ಜವರಾಯ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ
ಸತ್ಯಕ್ಕೂ, ವಾಸ್ತವಕ್ಕೂ ಇರುವ ಅಂತರವೇನು ಸಾರ್?
ಸತ್ಯ ದೇಹ; ವಾಸ್ತವ ಹವಾಗುಣಕ್ಕೆ ತಕ್ಕಂತೆ ತೊಡುವ ಪೋಷಾಕು.

■ ರಾಮ್